**ಒ ಎಸ್ .ಸಂಖ್ಯೆ: 1/2021**

**ಪಿ ಡಬ್ಲ್ಯೂ: 1**

**ದಿನಾಂಕ: 02-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿಗಳ ಪರ ವಕೀಲರಾದ ಶ್ರೀ ಡಿ ಎಮ್ ಜಿ ಅವರಿಂದ:**

1. ನಾನು ಮುದೇನೂರನಲ್ಲಿ ವಾಸ ಮಾಡುತ್ತೇನೆ. ದಾವಾ ಆಸ್ತಿಗಳು ಸಾಸ್ವಿಹಾಳ ಸೀಮಾದಲ್ಲಿ ಇವೆ. ಮುದೇನೂರನಿಂದ ಸಾಸ್ವಿಹಾಳಕ್ಕೆ ಸುಮಾರು 3 ರಿಂದ ಮೂರುವರೆ ಕಿ.ಮೀ. ದೂರ ಆಗಬಹುದು.

2. ನಾನು ಸೂಗಪ್ಪ ಅವರನ್ನು ಯಾವಾಗ ಮದುವೆ ಆಗಿರುತ್ತೇನೆ ಎಂದು ದಿನಾಂಕ ಗೊತ್ತಿಲ್ಲ, ಹಾಗೂ ಎಷ್ಟು ವರ್ಷದ ಹಿಂದೆ ಮದುವೆ ಆಗಿದೆ ಎಂದು ನೆನಪು ಇಲ್ಲ. ಮದುವೆ ಮೂದೇನೂರು ಗ್ರಾಮದಲ್ಲಿ ಆಗಿದೆ. ನಾನು ಸೂಗಪ್ಪ ಅವರ ಜೊತೆ ಮದುವೆ ಆದ ಬಗ್ಗೆ ತೋರಿಸಲು ಒಂದು ಪೊಟೊ ಮಾತ್ರ ಇದೆ, ಮದುವೆ ಕಾರ್ಡ ಇಲ್ಲ. ಸದರಿ ಪೊಟೊವನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ಸದರಿ ಪೊಟೊ ಕೇಸ ಫೈಲನಲ್ಲಿ ಇದ್ದ ಬಗ್ಗೆ ತೋರಿಸುತ್ತಿರಾ ಎಂದರೆ ಇರಬಹುದು, ಸಾಕ್ಷಿಯು ನ್ಯಾಯಾಲಯದ ಕಡತವನ್ನು ಪರಿಶೀಲಿಸಿ ಪೊಟೊ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಪುನಃ ನುಡಿಯುತ್ತಾ ಮದುವೆ ಪೊಟೊ ಇಲ್ಲ ಎಂದು ನುಡಿಯುತ್ತಾರೆ. ಸದರಿ ಮದುವೆಯನ್ನು ಹಿರಿಯರು ಕೂಡಿ ಮಾಡಿರುತ್ತಾರೆ. ಸೂಗಪ್ಪನ ಅಕ್ಕ-ತಂಗಿಯರು ಸಹ ಮದುವೆಗೆ ಬಂದಿದ್ದರು. ಹಂಪಮ್ಮ ಅಲಿಯಾಸ್ ನೀಲಮ್, ಅಮರಮ್ಮ, ಪಾರ್ವತೆಮ್ಮ, ಶಿವಮ್ಮ, ಶಂಕ್ರಮ್ಮ ಅವರೂ ಮದುವೆಗೆ ಬಂದಿದ್ದರು. ಅದರಲ್ಲಿ ಹಂಪಮ್ಮ ತೀರಿಕೊಂಡಿರಬಹುದು. ನಾನು ಕರಡಿ ಅವರ ಕುಟುಂಬಕ್ಕೆ ಸಂಬಂಧ ಪಟ್ಟವಳು ಅಲ್ಲದ ಕಾರಣ ನಿಖರವಾಗಿ ಯಾರು ತೀರಿಕೊಂಡಿರುತ್ತಾರೆ ಎಂದು ನನಗೆ ಹೇಳಲಾಗುತ್ತಿಲ್ಲ ಎಂದರೆ ಸಾಕ್ಷಿಯು ಹಂಪಮ್ಮ ತೀರಿಕೊಂಡಿರುತ್ತಾಳೆ ಎಂದು ನುಡಿಯುತ್ತಾರೆ. ನಾನು ಮಂಗಳೂರಿಗೆ ದುಡಿಯಲು ಹೋಗಿ ಬಂದು ಮಾಡುತ್ತಿದ್ದ ಕಾರಣ ಹಂಪಮ್ಮ ಯಾವಾಗ ತೀರಿಕೊಂಡಿರುತ್ತಾಳೆ

ಎಂದು ಗೊತ್ತಿಲ್ಲ. 2-3 ತಿಂಗಳಿಗೊಮ್ಮೆ ಊರಿಗೆ ಬಂದು ಹೋಗಿ ಮಾಡುತ್ತಿದ್ದೆ, ಈಗ 2 ವರ್ಷದಿಂದ ಊರಲ್ಲೆ ಇದ್ದೇನೆ.

3. ಸೂಗಪ್ಪನಿಗೆ 5 ಜನ ಅಕ್ಕ-ತಂಗಿಯರು. ದಾವಾ ಹಾಕುವ ಕಾಲಕ್ಕೆ ಮೂಲ ಪುರಷ ಬಸಪ್ಪನಿಗೆ ಸೂಗಪ್ಪ ಮತ್ತು ಚಂದ್ರಪ್ಪ ಎಂಬ ಇಬ್ಬರೂ ಮಕ್ಕಳು ಮಾತ್ರ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸಾಕ್ಷಿಯು ಸರಿಯಾಗಿ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. 5 ಜನ ಹೆಣ್ಣು ಮಕ್ಕಳ ಹೆಸರನ್ನು ನಾನು ಬರೆಸಿಲ್ಲ. ಹೆಣ್ಣು ಮಕ್ಕಳ ಆಸ್ತಿ ಹೊಡೆಯಲು ನಾನು ಉದ್ದೇಶ ಪೂರ್ವಕವಾಗಿ ಅವರ ಹೆಸರು ಸೇರಿಸಿಲ್ಲ ಎಂದರೆ ಸಾಕ್ಷಿಯು ನನಗೆ ಆಸ್ತಿ ಬೇಕು ಎಂದು ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ 5 ಜನ ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಪಾಲು ಕೊಡಲು ನನ್ನ ಒಪ್ಪಿಗೆ ಇದೆ. ನಾನು ಕರಡಿ ಮನೆತನಕ್ಕೆ ಸಂಬಂಧ ಇಲ್ಲದ ಕಾರಣ ನನಗೆ 5 ಜನ ಹೆಣ್ಣು ಮಕ್ಕಳ ಹೆಸರು ಗೊತ್ತಿಲ್ಲ ಎಂದರೆ ಸಾಕ್ಷಿಯು ಮೇಲೆ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನಾನು ವಾದಪತ್ರದಲ್ಲಿ 5 ಜನ ಹೆಣ್ಣುಮಕ್ಕಳ ಹೆಸರನ್ನು ಉದ್ದೇಶಪೂರ್ವಕವಾಗಿ ಸೇರಿಸದೇ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

4. ಸೂಗಪ್ಪ ಯಾವಾಗ ತೀರಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ಸೂಗಪ್ಪ ತೀರಿಕೊಂಡು ಸುಮಾರು 10-12 ವರ್ಷ ಆಗಿರಬಹುದು. ಸೂಗಪ್ಪ ಮಂಗಳೂರಿನಲ್ಲಿ ತೀರಿಕೊಂಡಿರುತ್ತಾನೆ. ಸೂಗಪ್ಪನ ಅಂತ್ಯಕ್ರಿಯೆ ಆತನ ಹೆಂಡತಿ ಊರು ಮೈಲಾಪೂರದಲ್ಲಿ ಆಗಿದೆ. ನಾನು ಆತನ ಅಂತ್ಯಕ್ರಿಯೆಗೆ ಹೋಗಿಲ್ಲ ಎಂದರೆ ಸರಿಯಲ್ಲ.

5. ನನಗೆ ಮಕ್ಕಳು ಇಲ್ಲ. ಸೂಗಪ್ಪ ತೀರಿಕೊಂಡ ನಂತರ ನಾನು ಮತ್ತು ಪ್ರತಿವಾದಿಗಳು ಒಂದೇ ಮನೆಯಲ್ಲಿ ವಾಸ ಆಗಿರಲಿಲ್ಲ, ಎಲ್ಲರೂ ಬೇರೆ ಬೇರೆ ಬಾಡಿಗೆ ಮನೆಯಲ್ಲಿ ವಾಸ ಇದ್ದೇವು. ಸಾಸ್ವಿಹಾಳ ಗ್ರಾಮದಲ್ಲಿ 2 ಜಮೀನುಗಳ ಉತ್ಪನ್ನವನ್ನು ನನ್ನ ಗಂಡ ಬದುಕಿದ್ದಾಗ ಪ್ರತಿವಾದಿಗಳು ಕೊಡುತ್ತಿದ್ದರು, ಆದರೆ ಈಗ ಅವರೇ ಉತ್ಪನ್ನ ತಿನ್ನುತ್ತಿದ್ದಾರೆ. ಪ್ರತಿವಾದಿಗಳೇ ಸದರಿ ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ನಾವು ವಾದ ಪತ್ರದಲ್ಲಿ ಜಂಟಿ ಕುಟುಂಬದಲ್ಲಿ ವಾಸ ಇದ್ದೇವೆ ಎಂದು

ಸುಳ್ಳು ಹೇಳಿ ಬರೆಸಿದ್ದೇನೆ ಎಂದರೆ ಸಾಕ್ಷಿಯು ಮದುವೆ ಆದಾಗ ಕೂಡಿ ಇದ್ದೇವು, ಈಗ ಇಲ್ಲ ಎಂದು ನುಡಿಯುತ್ತಾರೆ. ಈಗ ಸುಮಾರು 5-6 ವರ್ಷದಿಂದ ನಾನು ಹೊಲದ ಸ್ವಾಧೀನದಲ್ಲಿ ಇಲ್ಲ. ನಾನು ಸುಳ್ಳು ಅಫಿಡವೀಟ್‌ನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

6. ನಾನು ಕರಡಿ ಮನೆತನದ ಸೂಗಪ್ಪನ ಹೆಂಡತಿ ಅಲ್ಲ, ಮುದೇನೂರು ಗ್ರಾಮದ ಬೇರೊಬ್ಬ ಸೂಗಪ್ಪ ಎಂಬುವವರ ಹೆಂಡತಿ ಎಂದರೆ ಸರಿಯಲ್ಲ. ಸೂಗಪ್ಪನಿಗೆ ನಾನು ಒಬ್ಬಳೇ ಹೆಂಡತಿ. ಸೂಗಪ್ಪ ಮನೆತನಕ್ಕೆ ನಾನು ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಆಸ್ತಿಗಳನ್ನೂ ಕಬಳಿಸಲು ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸೂಗಪ್ಪ ಸತ್ತ ನಂತರ ಚಂದ್ರಪ್ಪನ ಹೆಸರಿನಲ್ಲಿ ಆಸ್ತಿ ವರ್ಗಾವಣೆ ಆಗಿದೆ. 2012 ರಲ್ಲಿ ಚಂದ್ರಪ್ಪನ ಹೆಸರಿನಲ್ಲಿ ಆಸ್ತಿ ವರ್ಗಾವಣೆ ಆಗಿದೆ ಎಂದರೆ ಸರಿ. ನಾನು ಮಂಗಳೂರಿನಲ್ಲಿ ದುಡಿಯಲು ಹೋಗಿದ್ದ ಕಾರಣ ನನಗೆ ಆ ವಿಚಾರ ಗೊತ್ತಿರಲಿಲ್ಲ, ಆತ ಸತ್ತ ನಂತರ ಹೆಂಡತಿಯ ಹೆಸರಿಗೆ ಆಸ್ತಿ ವರ್ಗಾವಣೆ ಆಗುವಾಗ ಗೊತ್ತಾಗಿ ನಾನು ತಕರಾರು ಮಾಡಿರುತ್ತೇನೆ. ನಾನು ಸೂಗಪ್ಪನ ಹೆಂಡತಿ ಎಂದು ತೋರಿಸಲು ಸ್ಪಷ್ಟ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸೂಗಪ್ಪನ ಹೆಂಡತಿ ಎಂದು ತೋರಿಸಲು ಆಧಾರ ಕಾರ್ಡ, ರೇಶನ್ ಕಾರ್ಡ, ವೋಟಿಂಗ್ ಕಾರ್ಡ್ ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಗಳು ಖೊಟ್ಟಿ ಇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ.ಕೇ. ಸರಿ ಇದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ. ನ್ಯಾ.ದಂಡಧಿಕಾರಿಗಳು, ಕುಷ್ಟಗಿ**